ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 109-117
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿ ಜಾಗತೀಕರಣ: ಹಿನ್ನೆಲೆ, ಅನುಕೂಲ ಮತ್ತು ಅನಾನುಕೂಲಗಳು

**ಸುಪ್ರಿತ್ ಕುಮಾರ್[1] ಮತ್ತು ಪ್ರೊ. ಎಸ್. ಶಿವರಾಜಪ್ಪ[2]**
[1]ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
[2]ಮಾರ್ಗದರ್ಶಕರು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಜಾಗತೀಕರಣವು ಕಳೆದ ಕೆಲವು ದಶಕಗಳಲ್ಲಿ ಭಾರತದ ಆರ್ಥಿಕತೆ, ಸಮಾಜ ಮತ್ತು ಸಂಸ್ಕೃತಿಯನ್ನು ಆಳವಾಗಿ ರೂಪುಗೊಳಿಸಿದೆ. ವಿವಿಧ ದೇಶಗಳ ನಡುವೆ ಸರಕುಗಳು, ಸೇವೆಗಳು, ಮಾಹಿತಿ ಮತ್ತು ಕಲ್ಪನೆಗಳ ವಿನಿಮಯದ ಮೂಲಕ ಜಾಗತಿಕ ಸಂವಹನ ಮತ್ತು ಪರಸ್ಪರ ಅವಲಂಬಿತತೆಯ ಹೆಚ್ಚುವಿಕೆಯನ್ನು ಜಾಗತೀಕರಣ ಎನ್ನುತ್ತಾರೆ. ಭಾರತದಲ್ಲಿ, 1991ರ ಆರ್ಥಿಕ ಉದಾರೀಕರಣ ನೀತಿಗಳ ನಂತರ ಜಾಗತೀಕರಣ ಹೆಚ್ಚು ವೇಗ ಪಡೆದುಕೊಂಡಿತು, ಇದು ವಿದೇಶಿ ಹೂಡಿಕೆ, ಅಂತರರಾಷ್ಟ್ರೀಯ ವ್ಯಾಪಾರ ಮತ್ತು ತಾಂತ್ರಿಕ ಅಭಿವೃದ್ಧಿಗಳಿಗೆ ಬಾಗಿಲು ತೆರೆಸಿತು. ಈ ಪರಿವರ್ತನೆಯ ಅಲೆ ಭಾರತಕ್ಕೆ ವೇಗದ ಆರ್ಥಿಕ ಬೆಳವಣಿಗೆಯನ್ನು ತಂದುಕೊಟ್ಟಿತಲ್ಲದೆ, ಕೈಗಾರಿಕೆಗಳು, ಶಿಕ್ಷಣ, ಬದುಕಿನ ಶೈಲಿ ಮತ್ತು ಜಾಗತಿಕ ಮನ್ನಣೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿತು. ಆದರೆ, ಜಾಗತೀಕರಣವು ಆರ್ಥಿಕ ಅಸಮತೆ, ಸಂಸ್ಕೃತಿಯ ಬದಲಾವಣೆಗಳು ಮತ್ತು ಬಲವಾದ ನಿಯಂತ್ರಣ ವ್ಯವಸ್ಥೆಗಳ ಅವಶ್ಯಕತೆ ಎಂಬ ಹೊಸ ಸವಾಲುಗಳನ್ನು ಕೂಡ ಒಡ್ಡಿದೆ. ಜಾಗತೀಕರಣದ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು, ನೂತನ ಜಗತ್ತಿನಲ್ಲಿ ಭಾರತದ ಪ್ರಯಾಣವನ್ನು ಅರಿಯುವಂತೆ ಮಾಡುತ್ತದೆ ಮತ್ತು ಭವಿಷ್ಯದ ದಿಕ್ಕಿನಲ್ಲಿ ಚಿಂತಿಸಲು ಸಹಕರಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಭಾರತದಲ್ಲಿ ಜಾಗತೀಕರಣದ ಹಿನ್ನೆಲೆ, ಅನುಕೂಲ ಮತ್ತು ಅನಾನುಕೂಲಗಳನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಭಾರತ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಅಭಿವೃದ್ಧಿಶೀಲ ರಾಷ್ಟ್ರ.*

**ಪೀಠಿಕೆ**

ಭಾರತವು 1980ರ ದಶಕದಲ್ಲಿ ಗಂಭೀರ ಸಮಗ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡು 1990ರ ಆರಂಭವನ್ನು ದೇಶದ ವಿದೇಶಿ ವಿನಿಮಯ ಸಂಗ್ರಹ ಕೇವಲ ಹತ್ತುದಿನಗಳ ಆಮದುಗಳ ಪಾವತಿಗೆ ಸಾಲುವಷ್ಟು ಇದ್ದಿತು. ಈ ಸಂದರ್ಭದಲ್ಲಿ ದೇಶವು ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ (IMF) ಬಹುದೊಡ್ಡ ಮೊತ್ತದ ಸಾಲ ಪಡೆಯುವಂತಾಯಿತು. ಇದರಿಂದ ದೇಶವನ್ನು ಒಂದು ದಿವಾಳಿಯ ಅಂಚಿನಲ್ಲಿರುವ ದೇಶ ಎಂದು ಘೋಷಿಸುವುದೊಂದೇ ಬಾಕಿ ಉಳಿದಿತ್ತು. ಆ ಸಂದರ್ಭದಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಪಿ.ವಿ. ನರಸಿಂಹರಾವ್ ಮತ್ತು ಆರ್ಥಿಕ ಹಣಕಾಸು ಮಂತ್ರಿಯಾಗಿದ್ದ ಡಾ.ಮನಮೋಹನ್ ಸಿಂಗ್ ಅವರುಗಳು ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ

***Please cite this article as:*** ಸುಪ್ರಿತ್ ಕುಮಾರ್. (2025). ಭಾರತದಲ್ಲಿ ಜಾಗತೀಕರಣ: ಹಿನ್ನೆಲೆ, ಅನುಕೂಲ ಮತ್ತು ಅನಾನುಕೂಲಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 109–117

ಪಾರುಮಾಡಲು ನೂತನ ಆರ್ಥಿಕ ನೀತಿಯನ್ನು ಅಂದರೆ 1990ರ ದಶಕದಲ್ಲಿ ಅಳವಡಿಸಿಕೊಂಡ ಬಹಿರ್ಮುಖಿ ಅಭಿವೃದ್ಧಿ ನೀತಿ ತೆರೆದ ಅಭಿವೃದ್ಧಿ ನೀತಿಯನ್ನು ಜಾರಿಗೊಳಿಸಿದರು. ಈ ನೀತಿಯನ್ನು ಅಂದಿನ ಸರ್ಕಾರದ ಹಲವಾರು ಸಂಸದರು ಬೆಂಬಲಿಸಿದರು ಹಾಗೂ ಕೆಲವರು ವಿರೋಧಿಸಿದರು. ಕೊನೆಗೆ ಎಲ್.ಪಿ.ಜಿ. ಎಂಬ ನೂತನ ಆರ್ಥಿಕ ನೀತಿಯನ್ನು ಜಾರಿಗೆ ತರಲಾಯಿತು. ಎಲ್.ಪಿ.ಜಿ. ಎಂದರೆ ಉದಾರೀಕರಣ (Liberalisation), ಖಾಸಗೀಕರಣ (Privatisation) ಮತ್ತು ಜಾಗತೀಕರಣ (Globalisation) ಎಂಬುವು. ಭಾರತದಲ್ಲಿ 1991 ರಲ್ಲಿ ಆರಂಭಗೊಂಡ ನೂತನ ಆರ್ಥಿಕ ಸುಧಾರಣೆಗಳ ಮೂರು ಪ್ರಮುಖವಾದ ಆಯಾಮಗಳಿವೆ

**ಜಾಗತೀಕರಣದ ಹಿನ್ನೆಲೆ (ಜುಲೈ 24, 1991 ರಲ್ಲಿ ಜಾರಿಗೆ ಬಂದಿತು)**

ಜಾಗತೀಕರಣವನ್ನು ತಿಳಿದುಕೊಳ್ಳಬೇಕಾದರೆ ಅದರ ಅಂಗಗಳಾದ ಉದಾರೀಕರಣ ಹಾಗೂ ಖಾಸಗೀಕರಣಗಳ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ.

**ಉದಾರೀಕರಣ**

ಉದಾರೀಕರಣವು ನೂತನ ಆರ್ಥಿಕ ನೀತಿಯ ಲಕ್ಷಣಗಳಲ್ಲಿ ಒಂದಾಗಿದೆ ಹಾಗೂ ಒಂದು ದೇಶ ತನ್ನ ಆರ್ಥಿಕ ಸಾಮಾಜಿಕ ರಾಜಕೀಯ ಶೈಕ್ಷಣಿಕ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ವಿಶ್ವದ ಎಲ್ಲಾ ರಾಷ್ಟ್ರಗಳೊಂದಿಗೆ ತನ್ನ ಉತ್ತಮ ಸಂಬಂಧವನ್ನು ಎಲ್ಲಾ ಆರ್ಥಿಕ ಕ್ಷೇತ್ರಗಳಲ್ಲಿ ವ್ಯವಹರಿಸಲು ಮುಕ್ತವಾದ ವಾತಾವರಣವನ್ನು ಅಂದರೆ ಕಾನೂನು ಮತ್ತು ನಿಯಮಗಳು, ಕಾರ್ಯ ವಿಧಾನ, ಹತೋಟಿ ಮತ್ತು ನಿಯಂತ್ರಣ ಮುಂತಾದವುಗಳನ್ನು ಸರಳೀಕರಣಗೊಳಿಸುವುದೇ ಉದಾರೀಕರಣವಾಗಿದೆ. ಉದಾ: (1) ಸರಕು ಮತ್ತು ಸೇವೆಗಳ ಮೇಲಿನ ಸಾಗಾಟದ ಸಾರಿಗೆ ವೆಚ್ಚದ ನಿರ್ಬಂಧವನ್ನು ತೊಡೆದು ಹಾಕುವುದು. (2) ಖಾಸಗಿ ಉದ್ಯಮ ಮತ್ತು ಬಂಡವಾಳವು ಯಾವುದೇ ಕೈಗಾರಿಕೆ ವ್ಯಾಪಾರ ವಹಿವಾಟು ಹಾಗೂ ವ್ಯವಹಾರವನ್ನು ಪ್ರವೇಶಿಸಲು ಸ್ವಾತಂತ್ರ್ಯ ನೀಡುವುದು. (3) ಒಂದು ದೇಶದ ಸರ್ಕಾರಿ ನಿಯಂತ್ರಣ ಮತ್ತು ಪರವಾನಗಿ ನೀತಿಯನ್ನು ರದ್ದು ಪಡಿಸುವುದು.

**ಖಾಸಗೀಕರಣ**

ನೂತನ ಆರ್ಥಿಕ ನೀತಿಯ ಮತ್ತೊಂದು ಪ್ರಮುಖ ಲಕ್ಷಣವೇ ಖಾಸಗೀಕರಣ. ಖಾಸಗೀಕರಣವೆಂದರೆ ಆರ್ಥಿಕತೆಯಲ್ಲಿ ಖಾಸಗಿ ಉದ್ಯಮ ಮತ್ತು ಬಂಡವಾಳಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಹಾಗೂ ತಾತ್ವಿಕವಾಗಿ ರಾಷ್ಟ್ರೀಕೃತ ಕೈಗಾರಿಕೆಗಳು ಹಾಗೂ ಇತರೆ ಸಾರ್ವಜನಿಕ ವ್ಯವಹಾರಿಕ ಉದ್ಯಮಗಳಲ್ಲಿ ಸರ್ಕಾರಿ ಒಡೆತನದ ಸಮ ಬಂಡವಾಳವನ್ನು ಸರ್ಕಾರಿ ನಿಯಂತ್ರಣದ ನಷ್ಟ ಅಥವಾ ನಷ್ಟವಿಲ್ಲದ ಖಾಸಗಿ ಹೂಡಿಕೆದಾರರಿಗೆ ಮಾರಾಟ ಮಾಡುವುದಾಗಿದೆ. ಉದಾ: (1) ಸಾರ್ವಜನಿಕ ಉದ್ಯಮಗಳ ಮೇಲೆ ಹೂಡಿಕೆ ಹಿಂತೆಗೆದು ಒಂದು ಭಾಗವನ್ನು ಖಾಸಗಿ ವಲಯಕ್ಕೆ ಮಾರಾಟ ಮಾಡುವುದು (2) ಅರಾಷ್ಟ್ರೀಕರಣ (De-Nationalisation) ಅಂದರೆ ಸಾರ್ವಜನಿಕ ಉದ್ಯಮಗಳ ಮಾಲೀಕತ್ವವನ್ನು ಖಾಸಗಿ ವಲಯದವರಿಗೆ ಹಸ್ತಾಂತರಿಸುವುದು. (3) ಸಾರ್ವಜನಿಕವಾಗಿ ಭವಿಷ್ಯದ ವಿಸ್ತರಣೆ ಮತ್ತು ನೂತನ ಉದ್ಯಮಗಳ ಸ್ಥಾಪನೆ ಮೇಲೆ ಕಡಿವಾಣ ಹಾಕುವುದು ಹಾಗೂ ನಿಯಂತ್ರಿಸುವುದು ಖಾಸಗೀಕರಣದ ಉದ್ದೇಶವಾಗಿರುತ್ತದೆ.

**ಜಾಗತೀಕರಣ**

ನೂತನ ಆರ್ಥಿಕ ನೀತಿಯ ಮೂರನೇ ಪ್ರಮುಖವಾದ ಲಕ್ಷಣವೇ ಈ ಜಾಗತೀಕರಣವಾಗಿದೆ ಜಾಗತೀಕರಣದ ಮೂಲಕ ಭಾರತದ ಆರ್ಥಿಕತೆಯನ್ನು ಬಹುಮುರ್ಮುಖಿ ಆಧಾರಿತ (Outwardly oriented)ವನ್ನಾಗಿ ಮಾಡಲಾಗಿದೆ. ದೇಶದ ಆರ್ಥಿಕತೆಯನ್ನು ಜಾಗತಿಕ ರಾಷ್ಟ್ರಗಳ

ಆರ್ಥಿಕತೆಯೊಂದಿಗೆ ಸಂಘಟಿಸುವುದನ್ನು ವ್ಯವಹರಿಸುವುದನ್ನು ಜಾಗತೀಕರಣ ಎನ್ನಲಾಗುತ್ತದೆ. ಜೊತೆಗೆ ಅಂತರರಾಷ್ಟ್ರೀಯ ಪೈಪೋಟಿ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳುವ ದೇಶದ ಆರ್ಥಿಕತೆಯನ್ನು ಜಾಗತಿಕ ವ್ಯವಹಾರದ ಮುಕ್ತ ಮಾರುಕಟ್ಟೆಗೆ ತೆರೆದಿಡುವುದಾಗಿರುತ್ತದೆ. ಜೊತೆಗೆ ಭಾರತದ ಆರ್ಥಿಕ ಕ್ಷೇತ್ರವನ್ನು ಜಾಗತಿಕ ಮಟ್ಟದ ಆರ್ಥಿಕತೆಯೊಂದಿಗೆ ಒಗ್ಗೂಡಿಸುವುದು ಹಾಗೂ ಗುರುತಿಸುವುದು. ದೇಶಗಳ ನಡುವಿನ ಸರಕುಗಳು, ಸೇವೆಗಳು, ಬಂಡವಾಳ ಮತ್ತು ತಂತ್ರಜ್ಞಾನದ ಚಲನೆಯ ಮೇಲಿನ ನಿಯಂತ್ರಣಗಳನ್ನು ತೊಡೆದುಹಾಕಿ ಮುಕ್ತವಾಗಿಡುವುದು.

1990ರ ದಶಕದ ಆರಂಭದಲ್ಲಿ ಭಾರತ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ವಿದೇಶಿ ವಿನಿಮಯ ಭಂಡಾರಗಳು ತೀರಾ ಕಡಿಮೆಯಾಗಿದ್ದು, ತಾತ್ಕಾಲಿಕ ಪರಿಹಾರಕ್ಕಾಗಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಮುಂತಾದ ಸಂಸ್ಥೆಗಳ ನೆರವು ಬೇಕಾಯಿತು. ಈ ಹಿನ್ನಲೆಯಲ್ಲಿ, ಭಾರತೀಯ ಸರ್ಕಾರ 1991ರಲ್ಲಿ ಆರ್ಥಿಕ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳನ್ನು ಜಾರಿಗೆ ತಂದಿತು. ಈ ನೀತಿಗಳ ಪ್ರಯುಕ್ತ ವಿದೇಶಿ ಹೂಡಿಕೆಗೆ ಅವಕಾಶ, ಸರ್ಕಾರಿ ನಿಯಂತ್ರಣಗಳ ತಗ್ಗಿಕೆ, ಮತ್ತು ಅನೇಕ ಕ್ಷೇತ್ರಗಳಲ್ಲಿ ಖಾಸಗಿ ಹೂಡಿಕೆಗೆ ಪ್ರೋತ್ಸಾಹ ನೀಡಲಾಯಿತು. ಇದರಿಂದ ಭಾರತ ಜಾಗತಿಕ ಆರ್ಥಿಕ ವ್ಯವಸ್ಥೆಯೊಂದರ ಅವಿಭಾಜ್ಯ ಅಂಗವಾಯಿತು.

ಖ್ಯಾತ ಭಾರತೀಯ ಅರ್ಥಶಾಸ್ತ್ರಜ್ಞರಾದ ಅಮರ್ತ್ಯ ಕುಮಾರ್ ಸೇನ್ ರವರು "ಜಾಗತೀಕರಣ ಎಂಬ ಬಿರುಗಾಳಿಯಿಂದ ಯಾರು ಕೂಡ ತಪ್ಪಿಸಿಕೊಳ್ಳಲು ಆಗುವುದಿಲ್ಲ. ನೀರಿಗೆ ಇಳಿದಾಗಿದೆ, ಹೇಗಾದರೂ ಮಾಡಿ ಈಜಿ ದಡ ಸೇರಬೇಕು. ಬಡವರಿಗೆ 'ಸಾಮಾಜಿಕ ಸುರಕ್ಷ ಜಾಲ' (Social Safety net)ವನ್ನು ನಿರ್ಮಿಸಿಕೊಂಡು ಮುನ್ನುಗ್ಗುವುದೊಂದೆ ಉಳಿದಿರುವ ಏಕೈಕ ದಾರಿ. ಆಗ ಭಾರತವೂ ಸಹ ಯಶಸ್ಸು ಕಾಣುವುದು ಖಂಡಿತಾ ಸಾಧ್ಯ. ಇನ್ನೂ ಕೂಡ ಇದು ಬೇಕೋ ಅಥವಾ ಬೇಡವೊ ಎಂದು ಯೋಚಿಸುವ ಕಾಲ ಇದಲ್ಲ" ಎಂದು ಹೇಳಿದ್ದಾರೆ.

ರಂಗರಾಜನ್ ಸಿ. ರವರ ಪ್ರಕಾರ "ಹೊಸ ಆರ್ಥಿಕ ನೀತಿಯು 1991 ರಿಂದ ಜಾರಿಗೊಳಿಸಲಾದ ಹಲವಾರು ಧೋರಣೆ ಕ್ರಮಗಳು ಮತ್ತು ಬದಲಾವಣೆಗಳನ್ನು ಒಳಗೊಂಡಿದೆ. ಈ ಕ್ರಮಗಳಲ್ಲಿ ಒಂದು ಸಾಮಾನ್ಯ ಧ್ಯೇಯವಿದೆ. ಉದ್ದೇಶವು ಬಹಳ ಸರಳವಾಗಿದ್ದು, ಅದು ವ್ಯವಸ್ಥೆಯ ದಕ್ಷತೆಯನ್ನು ಸುಧಾರಿಸುವುದಾಗಿದೆ. ಬಹುಮುರ್ಖಿ ನಿಯಂತ್ರಣಗಳ ನಿಯಂತ್ರಿತ ನೀತಿಯು ಖಾಸಗಿ ವಲಯದಲ್ಲೂ ಸಹ ಪೈಪೋಟಿಯನ್ನು ಕುಂದಿಸಿತ್ತು. ನೂತನ ಆರ್ಥಿಕ ನೀತಿಯ ಗುರಿಯು ವ್ಯವಸ್ಥೆಯಲ್ಲಿನ ಉತ್ಪಾದಕತೆ ಮತ್ತು ದಕ್ಷತೆಯನ್ನು ಸುಧಾರಿಸುವ ಸಾಧನವಾಗಿ ಆರ್ಥಿಕತೆಯಲ್ಲಿ ಹೆಚ್ಚು ಪೈಪೋಟಿಯುಕ್ತ ವಾತಾವರಣವನ್ನು ನಿರ್ಮಿಸುವುದಾಗಿದೆ.

ಭಾರತೀಯ ಅರ್ಥಶಾಸ್ತ್ರಜ್ಞ ಮನಮೋಹನ್‌ಸಿಂಗ್ ರವರು ಹಣಕಾಸಿನ ಮಂತ್ರಿಯಾಗಿ ತಮ್ಮ ನಿವೇದನ ಪತ್ರಿಕೆಯನ್ನು ಸಲ್ಲಿಸುವ ವೇಳೆಯಲ್ಲಿ "ಪ್ರಧಾನ ಪರಿಗಣನೆಯು ಕೈಗಾರಿಕಾ ಉತ್ಪಾದನೆಯ ದಕ್ಷತೆ ಮತ್ತು ಅಂತರರಾಷ್ಟ್ರೀಯ ಪೈಪೋಟಿ ಸಾಮರ್ಥ್ಯವನ್ನು ಹೆಚ್ಚಿಸುವುದು, ವಿದೇಶಿ ಹೂಡಿಕೆ ಮತ್ತು ತಂತ್ರಜ್ಞಾನವನ್ನು ಮೊದಲಿಗಿಂತಲೂ ಹೆಚ್ಚಿನ ದರ್ಜೆಯಲ್ಲಿ ಬಳಸಿಕೊಳ್ಳುವುದು. ಸಾರ್ವಜನಿಕ ವಲಯದ ಕಾರ್ಯನಿರ್ವಹಣೆಯನ್ನು ಸುಧಾರಿಸುವುದು ಮತ್ತು ಅವುಗಳ ವ್ಯಾಪ್ತಿಯನ್ನು ಪುನರ್ ವ್ಯವಸ್ಥೆಗೊಳಿಸುವುದು ಮತ್ತು ಆರ್ಥಿಕತೆಯ ಅವಶ್ಯಕತೆಗಳನ್ನು ಹೆಚ್ಚು ದಕ್ಷವಾಗಿ ಪೂರೈಸುವಂತೆ ಮಾಡಲು ಹಣಕಾಸಿನ ವಲಯವನ್ನು ಸುಧಾರಿಸಿ ಆಧುನೀಕರಣಗೊಳಿಸುವುದು" ಎಂದು ತಿಳಿಸುತ್ತ ನಮ್ಮ ವಿಷಯವನ್ನು ಮಂಡಿಸಿದರು.

ಒಟ್ಟಾರೆಯಾಗಿ ಭಾರತದ ಆರ್ಥಿಕ ಸುಧಾರಣೆಗಳ ಪ್ರಮುಖ ಧ್ಯೇಯೋದ್ದೇಶಗಳೆಂದರೆ "ಉದಾರೀಕೃತ

ವಿದೇಶಿ ವ್ಯಾಪಾರ, ಮುಕ್ತ ವಿನಿಯಮ ದರ, ಮುಕ್ತ ಮಾರುಕಟ್ಟೆ ಆಧಾರಿತ ಹಣಕಾಸು ವ್ಯವಸ್ಥೆ, ದಕ್ಷ ಮತ್ತು ಕ್ರಿಯಾತ್ಮಕ ಕೈಗಾರಿಕಾ ವ್ಯವಸ್ಥೆ, ಒಂದು ಸ್ವಾಯತ್ತ, ಸ್ಪರ್ಧಾತ್ಮಕ ಮತ್ತು ಮರು ವ್ಯಾಖ್ಯಾನಿತ ಸಾರ್ವಜನಿಕ ರಂಗದ ದೃಷ್ಟಿ ಮುಂತಾದವುಗಳನ್ನು ಒಳಗೊಂಡಿದೆ.

**ವಿದೇಶಿ ನೇರ ಹೂಡಿಕೆ (FDI)**

ಸ್ವಯಂಚಾಲಿತ, ಮಂಜೂರಾತಿ ಮತ್ತು ಚಾಲ್ತಿ ಖಾತೆಯಲ್ಲಿ ರೂಪಾಯಿಯ ಸಂಪೂರ್ಣ ಪರಿವರ್ತನೆ ಮಾಡುವುದು.

ಈ ಮೇಲ್ಕಂಡ ಉದಾರೀಕರಣ, ಖಾಸಗೀಕರಣದ ಜೊತೆ ಮಾರುಕಟ್ಟೆ ಸ್ನೇಹಿ ಸರ್ಕಾರ (Market Friendly State) ಮತ್ತು ಆಧುನೀಕರಣ (Modernization)ವನ್ನು ಜಾಗತೀಕರಣವು ಹೊಂದಿರುವುದನ್ನು ನೋಡಬಹುದು. ಇದರಿಂದ ಆಧುನಿಕ ತಂತ್ರಜ್ಞಾನ ಅಳವಡಿಕೆಗೆ ಅತ್ಯಧಿಕ ಪ್ರಾಶಾಸ್ತ್ಯ ನೀಡಿದ ಮತ್ತು ಈ ನೀತಿಯು ಎಲೆಕ್ಟ್ರಾನಿಕ್ಸ್, ಗಣಕಯಂತ್ರ ಮುಂತಾದ ಸೂರ್ಯೋದಯ ಕೈಗಾರಿಕೆ (Sunrise Industries)ಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತದೆ. ಸರ್ಕಾರವು ವಿದೇಶ ಸಹಭಾಗಿತ್ವ ಪ್ರಸ್ತಾವನೆಗಳಿಗೆ ಅನುಮತಿ ನೀಡುವ ಮೂಲಕ ಅತ್ಯಾಧುನಿಕ ತಂತ್ರಜ್ಞಾನದ ಅವಧಿಗೆ ಅವಕಾಶ ನೀಡಿದೆ ಹಾಗೂ ಹೊಸ ನೀತಿಯಿಂದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವಿಧ ಕೋಶೀಯ ವಿನಾಯಿತಿಗಳ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ರೋಗಗಸ್ತ ಕೈಗಾರಿಕಾ ಘಟಕಗಳನ್ನು ಸುಧಾರಿಸಲು ಮತ್ತು ಆಧುನೀಕರಣಗೊಳಿಸಲು ಕ್ರಮಕೈಗೊಳ್ಳಲು ಜಾಗತೀಕರಣ ನೀತಿಯು ಬಹಳ ಪ್ರಮುಖ ಪಾತ್ರ ವಹಿಸುತ್ತದೆ.

**ಜಾಗತೀಕರಣದ ಮೂಲ ಗ್ಯಾಟ್ (General Agreement on Tariff and Trade)**

ಎರಡನೇ ಮಹಾಯುದ್ಧವು ಜಾಗತೀಕವಾಗಿ ಮುಗಿದ ನಂತರ 2 ದಶಕಗಳಲ್ಲಿ ಅಮೇರಿಕ ದೇಶವು ವಿಶಿಷ್ಟ ಸನ್ನಿವೇಶಗಳ ಕಾರಣದಿಂದ ಅಭೂತಪೂರ್ವ ಸಮೃದ್ಧಿಯನ್ನು ಸಾಧಿಸಿತು ಮತ್ತು ವಿಶಾಲ ಭೂಭಾಗ ಅಪರಿಮಿತ ಸಂಪನ್ಮೂಲಗಳು ತಾಂತ್ರಿಕ ವೈಜ್ಞಾನಿಕ ದಕ್ಷತೆ, ರಾಜಕೀಯ ಸ್ವಾಧೀನತೆ ಎಲ್ಲವೂ ಸಮಾವೇಶಗೊಂಡು ಆ ದೇಶ ವಿಶ್ವದ ಹಿರಿಯಣ್ಣನಂತೆ ಬೆಳದು ವರ್ತಿಸಲಾರಂಭಿಸಿತು. 1944ರ ಜುಲೈ ತಿಂಗಳಿನಲ್ಲಿ ಅಮೇರಿಕ ನ್ಯೂಹ್ಯಾಮ್ ಫೈರ್ ಪ್ರಾಂತದ ಬ್ರೆಡನ್‌ವುಡ್ಸ್ ಎಂಬಲ್ಲಿ ಒಂದು ಸಭೆ ಸೇರಿ ಈ ಸಭೆಯ ಮುಖ್ಯ ಉದ್ದೇಶವೆಂದರೆ 1930ರ ದಶಕದಲ್ಲಿ ಅಮೇರಿಕದಲ್ಲಿ ಉಂಟಾಗಿದ್ದ ಆರ್ಥಿಕ ಬಹುದೊಡ್ಡ ಹಿಂಜರಿತ ನಷ್ಟ ಮತ್ತೊಮ್ಮೆ ಭವಿಷ್ಯದಲ್ಲಿ ಮರುಕಳಿಸದಂತೆ ಏನಾದರೂ ಉಪಾಯ ಹಾಗೂ ಸೂತ್ರ ಕಂಡುಹಿಡಿಯುವುದಕ್ಕೆ ಹಾಗೂ ಈ ಹಿಂಜರಿತ ಮತ್ತೆ ಬರದಂತೆ ತಡೆ ಕಟ್ಟಬೇಕಾದರೆ "ಪ್ರತ್ಯೇಕ ರಾಷ್ಟ್ರಗಳ ವಿದೇಶಿ ವಾಣಿಜ್ಯಕ್ಕೆ ಪ್ರತಿಬಂಧಕಗಳು ಇರಬಾರದು" ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಈ ಉದ್ದೇಶದಿಂದ ಎರಡೂ ಮಹಾ ಸಂಸ್ಥೆಗಳು ಉಗಮಕ್ಕೆ ಕಾರಣವಾಯಿತು. ಅವುಗಳೆಂದರೆ, ಅಂತರಾಷ್ಟ್ರೀಯ ಹಣಕಾಸು ನಿಧಿ (IMF- International Monetary Fund) ಮತ್ತು World Bank (International Bank for Re-construction and Development) ವಿಶ್ವಬ್ಯಾಂಕ್ ಕೇವಲ ಈ ಎರಡೂ ಸಂಸ್ಥೆಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕತೆಯ ಸಾಧನೆ ಪೂರ್ಣಫಲಪ್ರದವಾಗಲಿಲ್ಲ ಎಂಬುದು ಗೊತ್ತಾಯಿತು. ಆದರೆ ದೇಶ ದೇಶಗಳ ವ್ಯವಹಾರದ ಮೇಲೆ ನಿಗಾ ಇಡುವುದರ ಮೂಲಕ ಸ್ವಲ್ಪಮಟ್ಟಿಗೆ ಸಂಬಂಧಗಳ ಬೆಸುಗೆ ಹಾಕಲು ಸಹಕಾರಿಯಾಯಿತು. ಹಲವಾರು ಸುತ್ತಿನ ಸಭೆಗಳನ್ನು ನಡೆಸಿ ಮುಕ್ತ ವಾಣಿಜ್ಯ

ವ್ಯವಹಾರದ ಅವಶ್ಯಕತೆಯನ್ನು ಹಿರಿಯ ರಾಷ್ಟ್ರಗಳು ಕಿರಿಯ ರಾಷ್ಟ್ರಗಳಿಗೆ ಮನವೊಲಿಸುವ ಪ್ರಯತ್ನ ನಡೆಯುತ್ತಲೇ ಇತ್ತು. ನಂತರದ ದಿನಗಳಲ್ಲಿ "ಮುಕ್ತ ಆರ್ಥಿಕತೆ"ಯ ನೀತಿ ನಿಯಮಗಳನ್ನು ರೀತಿ ರಿವಾಜುಗಳನ್ನು ರಚಿಸುವುದಕ್ಕಾಗಿ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದನ್ನು ಗ್ಯಾಟ್ (GATT-General Agreement on Tariff and Trade) ಸುಂಕಗಳ ಮತ್ತು ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ ಎಂದು ಕರೆಯುತ್ತಾರೆ. ಇದು 1948 ರಲ್ಲಿ ಕಾರ್ಯಗತಗೊಂಡಿದ್ದ ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದ, ಸುಂಕ ಮತ್ತು ವ್ಯಾಪಾರದ ಮೇಲಿನ ಒಪ್ಪಂದಕ್ಕೆ ಸಂಬಂಧಿಸಿದಂತೆ 1993 ರವರೆಗೆ ಗ್ಯಾಟ್‌ನ ಆಶ್ರಯದಲ್ಲಿ ವಿಶ್ವದ ಹಲವು ಕಡೆ ಸಭೆ ನಡೆಸಿ ಅನೇಕ ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಯಿತು.

**ಜಾಗತೀಕರಣದ ಅನುಕೂಲಗಳು**

ಜಾಗತೀಕರಣದಿಂದ ಸುಂಕಗಳು, ಕೋಟಾಗಳು ಮತ್ತು ದೇಶ ದೇಶಗಳ ನಡುವೆ ವಿದೇಶಿ ವಿನಿಮಯ ನಿಯಂತ್ರಣಗಳು ಕಡಿಮೆಗೊಳಿಸಿ ರಾಷ್ಟ್ರೀಯ ಆರ್ಥಿಕತೆಗಳನ್ನು ಮುಕ್ತಗೊಳಿಸುವುದು ಮತ್ತು ದೀರ್ಘಾವಧಿಯಲ್ಲಿ ಇಡೀ ವಿಶ್ವವನ್ನು ಮುಕ್ತ ವ್ಯಾಪಾರಕ್ಕೆ ನಿಕಟವಾದ ಸ್ಥಿತಿಯೆಡೆಗೆ ಕೊಂಡೊಯ್ಯುವುದು. ಜಾಗತೀಕರಣದಿಂದ ಸ್ಪರ್ಧಾತ್ಮಕ ಜಗತ್ತಿನ ಸೃಷ್ಟಿ ಸಾಧ್ಯವಿರುವುದರ ಜೊತೆಗೆ ದಕ್ಷ ಬಳಕೆಯ ಅವಕಾಶಗಳನ್ನು ಕಲ್ಪಿಸುವುದು ಸಾಧ್ಯವಾಗುತ್ತದೆ. ಜಾಗತೀಕರಣದಿಂದ ರಾಷ್ಟ್ರೀಯ ಮತ್ತು ಜಾಗತಿಕ ಉತ್ಪನ್ನವನ್ನು ವಿಸ್ತರಿಸಲು ನೇರವಾಗುವುದಲ್ಲದೆ, ತಂತ್ರಜ್ಞಾನ, ಅನುಭೋಗ, ಗುಣಮಟ್ಟದ ವ್ಯವಹಾರ, ವ್ಯಾಪಾರ, ಬಂಡವಾಳ ಮತ್ತು ಶ್ರಮದ ಚಲನೆ, ಆರ್ಥಿಕ ನೈಜ ಕೂಲಿ ಮತ್ತು ಆದಾಯ ಹೂಡಿಕೆಯನ್ನು ಸಾಧಿಸಲು ಸಾಧ್ಯವಾಗುತ್ತದೆ, ಜಾಗತೀಕರಣದಿಂದ ಬಂಡವಾಳ ಶಾಹಿತ್ಯವನ್ನು ಬಲಪಡಿಸುವುದು ಮತ್ತು ವಿಸ್ತಾರಗೊಳಿಸುವುದು, ಉದ್ಯಮಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ವಿಸ್ತರಿಸುತ್ತ ಖಾಸಗಿ ಮಾಲೀಕತ್ವಕ್ಕೆ ಅವಕಾಶಗಳನ್ನು ಸೃಷ್ಟಿಸುವುದು, ತಂತ್ರಜ್ಞಾನದ ಮುಕ್ತ ಹರಿವು, ಕೈಗಾರೀಕರಣದ ಪ್ರಗತಿ, ಉತ್ಪಾದನಾ ವ್ಯವಸ್ಥೆಯು ವಿಶ್ವದಾದ್ಯಂತ ಹರಡಲು ಸಾಧ್ಯ, ಸಂಸ್ಕಾರ ಮತ್ತು ಸಂಸ್ಕೃತಿಯ ವಿನಿಮಯ, ಉದ್ಯಮಗಳಿಂದ ಉದ್ಯೋಗಾವಕಾಶಗಳು ಹೆಚ್ಚುತ್ತಾ ವೈಯಕ್ತಿಕ ಆದಾಯದಲ್ಲಿ ಹೆಚ್ಚಳ ಹಾಗೂ ದೇಶದ ತಲಾಆದಾಯದಲ್ಲಿ ಪ್ರಗತಿ, ಹಿಂದೂ ಬಳವಣಿಗೆ(ಕಡಿಮೆ ಬೆಳವಣಿಗೆ ದರ)ಗೆ ತಿಲಾಂಜಲಿ ಮತ್ತು ಅಧಿಕ ಬೆಳವಣಿಗೆ ದರದ ಪಥಕ್ಕೆ ಪ್ರವೇಶ, ವಿದೇಶಿ ನೇರ ಹೂಡಿಕೆಯಲ್ಲಿ ಹೆಚ್ಚಳ, ಬ್ಯಾಂಕುಗಳು ಮತ್ತು ಸಾರ್ವಜನಿಕ ಉದ್ಯಮಗಳ ಲಾಭದಲ್ಲಿ ಹೆಚ್ಚಳ, ರಫ್ತು ವೃದ್ಧಿ, ಕಲ್ಯಾಣ ಮತ್ತು ಸಮೃದ್ಧಿಗಳ ಪ್ರವರ್ಧನೆ ಸಾಧ್ಯತೆಗಳು, ಮಾನವ ಸಂಪನ್ಮೂಲದ ಸಮತೋಲನ ಬೆಳವಣಿಗೆ ಸಾಧ್ಯ, ಜೀವನಮಟ್ಟದಲ್ಲಿ ಏರಿಕೆಯನ್ನು ಕಾಣಬಹುದು, ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹವಾಗಿದೆ, ಸಾರ್ವಜನಿಕ ಸಂಸ್ಥೆಗಳು ಖಾಸಗಿ ಸಂಸ್ಥೆಗಳೊಂದಿಗೆ ಸ್ಪರ್ಧಿಸುವುದು ಅಗತ್ಯವಾದಾಗ ಸ್ವಾಯತ್ತತೆಯನ್ನು ಸಾರ್ವಜನಿಕ ಕಂಪನಿಗಳಿಗೆ ನೀಡುವುದು ಹೀಗೆ ಮುಂತಾದ ಅನುಕೂಲಗಳನ್ನು ಹೊಂದಿದೆ.

**ಜಾಗತೀಕರಣದ ಅನಾನುಕೂಲಗಳು**

***ವಿಸ್ತಾರ ಅಭಿವೃದ್ಧಿಯ ತಂತ್ರದ ಕೊರತೆ:*** ಭಾರತದಲ್ಲಿ ಕಾರ್ಯಗತಗೊಂಡ ನೂತನ ಆರ್ಥಿಕ ನೀತಿಯಿಂದ ಉದ್ಯಮಶೀಲರ ನಿರ್ಣಯವು ಸಂಪೂರ್ಣವಾಗಿ ಮಾರುಕಟ್ಟೆ ಶಕ್ತಿಗಳನ್ನು ಅವಲಂಭಿಸಿರುವುದರಿಂದ ಸರ್ಕಾರದ ನೀತಿಗೆ ಯಾವುದೇ ಸ್ಥಾನ ಇಲ್ಲದಂತಾಗಿದೆ.

***ಮುಂಚಿತವಾಗಿ ಸಜ್ಜುಗೊಂಡಿಲ್ಲ:*** ಭಾರತದ ಆರ್ಥಿಕ ನೀತಿಯನ್ನು ಅಳವಡಿಸಿಕೊಳ್ಳಲು ಬೇಕಿರುವ

ತಂತ್ರಜ್ಞಾನದ ತಂತ್ರ ಅಥವಾ ಯೋಜನೆಯನ್ನು ಒಳಗೊಂಡಿಲ್ಲ.

***ಸುಧಾರಣೆಗಳ ತಪ್ಪು ಕ್ರಮಾನುಗತಿ:*** ಎಲ್.ಪಿ.ಜಿ.ಯಿಂದ ಸರ್ಕಾರಿ ಕೊರತೆ ಮತ್ತು ಸಾರ್ವಜನಿಕ ಹೂಡಿಕೆಯ ಕಡಿತ ಮತ್ತು ಬಂಡವಾಳ ಸರಕುಗಳ ಆಮದಿಗೆ ಅನುಮತಿ ನೀಡಿಕೆ ಮುಂತಾದ ಉದ್ದೇಶಗಳಲ್ಲಿ ಕಾಣಬಹುದಾಗಿದೆ. ಜೊತೆಗೆ ಸರ್ಕಾರದ ಲೆಕ್ಕಪತ್ರವನ್ನು ಸರಿಯಾಗಿ ನಿರ್ವಹಿಸದಿರುವುದು.

***ಬಲಹೀನ ಗ್ರಹಿಕೆ (Weak Perception):*** ಈ ಯೋಜನೆಯು ಕೇವಲ ಕೈಗಾರಿಕೆ ಮತ್ತು ಬಾಹ್ಯ ವಲಯಗಳಿಗೆ Dಧ್ಯತೆ ನೀಡುತ್ತದೆ. ಆದರೆ ದೇಶದ ಅತಿದೊಡ್ಡ ವಲಯದ ಕೃಷಿ ಈ ವ್ಯಾಪ್ತಿಯಿಂದ ಹೊರಗುಳಿದಿದೆ. ಆದ್ದರಿಂದ ಜಾಗತೀಕರಣದ ವ್ಯಾಪ್ತಿ ಸಂಕುಚಿತಗೊಂಡಿದೆ.

***ಮಾನವೀಯ ಅಂಶದ ಅಭಾವ (Lack of Human Face):*** ಭಾರತದಲ್ಲಿ ಕಾರ್ಯರೂಪ ಗೊಳ್ಳುತ್ತಿರುವ ಎಲ್.ಪಿ.ಜಿ. ಕಾರ್ಯಕ್ರಮವು ಮಾನವೀಯ ಮುಖ ಹೊಂದಿಲ್ಲ ಎಂದು ಟೀಕಿಸಲಾಗಿದೆ. ಈ ಕಾರ್ಯಕ್ರಮವನ್ನು ವ್ಯಾಪಕ, ಬಡತನ, ಕೆಳಮಟ್ಟದ ಮಾನವ ಅಭಿವೃದ್ಧಿ, ಸಾಮಾಜಿಕ ಸೇವೆಗಳು, ಆರೋಗ್ಯ ಮತ್ತು ಶಿಕ್ಷಣ ಸಾಮಾಜಿಕ ಕ್ಷೇಮಾಭ್ಯುದಯ ಮತ್ತು ಭದ್ರತೆ ಮುಂತಾದ ಬಡವರ ಪರ ಕಾರ್ಯಕ್ರಮಗಳ ಮೇಲಿನ ವೆಚ್ಚದ ಕಡಿತ ಮುಂತಾದ ಹಿನ್ನೆಲೆಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

***ಆದಾಯ ಮತ್ತು ಉದ್ಯೋಗದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ:*** ಹೊಸ ಆರ್ಥಿಕ ನೀತಿಯಿಂದ ದೇಶದ ಜನರ ಮೇಲೆ ವ್ಯಾಪಾರದ ಉದಾರೀಕರಣ ಸಣ್ಣಕೈಗಾರಿಕೆಗಳಿಗೆ ನೀಡಲಾಗುತ್ತಿದ್ದ ಪ್ರೋತ್ಸಾಹದ ಹಿಡಿತ ಹಾಗೂ ಅನಿಯಂತ್ರಿತ ಸ್ವದೇಶಿ ವಲಯ ಮುಂತಾದ ನಿಯಮದ ಕ್ರಮಗಳು ಆದಾಯ ಹಾಗೂ ಉದ್ಯೋಗದ ಮೇಲೆ ವ್ಯಾಪಕವಾದ ಪ್ರತಿಕೂಲ ಪರಿಣಾಮವನ್ನು ಬೀರಲಿವೆ ಎಂದು ಮುಂದಿನ ದಿನಗಳಲ್ಲಿ ಜನರಿಗೆ ನಿರುದ್ಯೋಗ ಕಾಡುತ್ತದೆ ಎಂದು ಆರ್ಥಿಕ ತಜ್ಞರು ಎಚ್ಚರಿಸಿದ್ದಾರೆ.

***ದೇಶದ ಸ್ವಾತಂತ್ರ್ಯ ಸ್ವಾಯತ್ತತೆಗೆ ಧಕ್ಕೆಯಾಗಿದೆ:*** ಎಲ್.ಪಿ.ಜಿ. ನೀತಿಯಿಂದ ಭಾರತ ದೇಶದಲ್ಲಿ ವಿದೇಶಿಗರ ಹೂಡಿಕೆ ಹಾಗೂ ಬಂಡವಾಳಕ್ಕೆ ರತ್ನಗಂಬಳಿಯ ಭವ್ಯ ಸ್ವಾಗತವನ್ನು ಹಾಗೂ ವಿಶ್ವಬ್ಯಾಂಕು WTO (World Trade Organization) ಮುಂತಾದ ಅಂತರರಾಷ್ಟ್ರೀಯ ಸಂಘಟನೆಗಳ ಇಚ್ಛೆಯಂತೆ ನಿರ್ಧಾರವನ್ನು ಕೈಗೊಳ್ಳುತ್ತಿರುವುದು ಹಾಗೂ ಮುಂತಾದ ಕ್ರಮಗಳು ದೇಶದ ಸ್ವಾಯತ್ತತೆಗೆ ಧಕ್ಕೆ ತಂದೊಡ್ಡುತ್ತವೆ ಎಂದು ಟೀಕಿಸಲಾಗಿದೆ.

***ದೇಶದಲ್ಲಿ ಆರ್ಥಿಕ ಅಸಮಾನತೆಯ ಹೆಚ್ಚಳ:*** ಹೊಸ ಆರ್ಥಿಕ ನೀತಿಯಿಂದ ಸಾರ್ವಜನಿಕ ಉದ್ಯಮ ಹಾಗೂ ಬಡತನಕ್ಕೆ ಪ್ರೋತ್ಸಾಹವನ್ನು ಕಡಿಮೆ ಮಾಡಿ ಖಾಸಗಿ ಹೂಡಿಕೆದಾರರಿಗೆ ಹಾಗೂ ಉದ್ಯಮ ನೈಪುಣ್ಯತೆಗೆ ನೀಡಲಾಗುತ್ತಿರುವ ತೆರಿಗೆ ಕಡಿತ ಹಾಗೂ ಕಾನೂನು ನಿಯಮ ಸಡಿಲ ಹಾಗೂ ಮುಂತಾದ ಯೋಜನೆಗಳಿಂದ ಆರ್ಥಿಕವಾಗಿ ಅಸಮಾನತೆಯು ಸಾರ್ವಜನಿಕ ಹಾಗೂ ಖಾಸಗಿ ವಲಯದಲ್ಲಿ ಮೂಡಿದೆ.

***ಬಹುರಾಷ್ಟ್ರೀಯ ಕಂಪನಿಗಳ ಅಟ್ಟಹಾಸ:*** ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಂದ ದೇಶೀಯವಾಗಿ ಇದ್ದಂತಹ ಸ್ಥಳೀಯ ಗೃಹ ಹಾಗೂ ಸಣ್ಣ ಕೈಗಾರಿಕಾ ಖಾದಿ ಉದ್ಯಮಗಳು ಹಾಗೂ ಕರಕುಶಲ ಕೈಗಾರಿಕೆಗಳು ಉತ್ಪಾದನೆಯನ್ನು ನಿಲ್ಲಿಸಿದವು ಹಾಗೂ ಆಧುನಿಕ ಕಾಲಕ್ಕೆ ವಿದೇಶಿ ವಸ್ತುಗಳ ಅಟ್ಟಹಾಸವು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಲಗ್ಗೆ ಇಟ್ಟವು. ಇದರಿಂದ ಸ್ವದೇಶಿ ವಸ್ತುಗಳ ಸಾಂಪ್ರದಾಯಿಕತೆ ಕ್ಷೀಣಿಸಿತು.

***ದೇಶದ ಬಹುದೊಡ್ಡ ಕೃಷಿ ಕ್ಷೇತ್ರದ ನಿರ್ಲಕ್ಷ್ಯ:*** ಎಲ್.ಪಿ.ಜಿ. ನೀತಿಯಿಂದ ದೇಶದ ಬಹುದೊಡ್ಡ ಕ್ಷೇತ್ರ.

ದೇಶದ ಬೆನ್ನೆಲುಬು ಆದಂತಹ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿ ಕೇವಲ ಬೃಹತ್ ಕೈಗಾರಿಕೆಗಳಿಗೆ ಬಟ್ಟೆ, ಸೀಮೆಂಟ್, ಕಬ್ಬಿಣ ಹಾಗೂ ಸಾರಿಗೆ ಹೊಸ ಕಾರುಗಳ ಉತ್ಪಾದನೆ ಹಾಗೂ ಇಂಜಿನಿಯರಿಂಗ್ ಕ್ಷೇತ್ರ, ತಂತ್ರಜ್ಞಾನ, ಕಂಪ್ಯೂಟರ್, ಮೊಬೈಲ್ ಮುಂತಾದ ಆಟೋಮೊಬೈಲ್‌ಗಳಿಗೆ ಪ್ರೋತ್ಸಾಹ ನೀಡಿ ಗ್ರಾಮೀಣ ಮಟ್ಟದ ಜನರ ಜೀವನಾಡಿ ಕೃಷಿ ಕ್ಷೇತ್ರದ ಬೆಳವಣಿಗೆಗೆ ಪ್ರೋತ್ಸಾಹ ನೀಡದೆ ಇರುವುದು ಕೂಡ ಕೃಷಿಕರ ಜೀವನಕ್ಕೆ ಇನ್ನೂ ಸಂಕಷ್ಟವೇ ಆಗಿದೆ. ಉದಾ: ಬೆಲೆ ನಿಗದಿ ಹಾಗೂ ಮಾರುಕಟ್ಟೆ ಮುಂತಾದವು.

***ಸ್ಥಳೀಯ ಜನರ ಕಾರ್ಯಕ್ರಮವಾಗಿ ರೂಪುಗೊಂಡಿಲ್ಲ:*** ಎಲ್.ಪಿ.ಜಿ. ನೀತಿಯು ದೇಶದಲ್ಲಿ ಇಂದು ಜಾರಿಗೆ ಬರುತ್ತಿರುವ ಆರ್ಥಿಕ ಸುಧಾರಣೆಯ ಕಾರ್ಯಕ್ರಮಗಳು ಸಾಮಾನ್ಯ ಜನರಿಗೆ ಕಾರ್ಯಕ್ರಮಗಳಾಗಿ ರೂಪುಗೊಂಡಿಲ್ಲ. ಈ ಕಾರ್ಯಕ್ರಮಗಳಲ್ಲಿ ತಂತ್ರಜ್ಞಾನಗಳೇ ಹೆಚ್ಚು ತೊಡಗಿಸಿಕೊಂಡು ಕೇವಲ ಸಂಘಟಿತ ಜನರು ಹಾಗೂ ಸಮುದಾಯ ಮಾತ್ರ. ಇದರಿಂದ ಹೆಚ್ಚು ಪ್ರಯೋಜನ ಪಡೆದು ಅಸಂಘಟಿತ ವಲಯದ ಜನರಿಗೆ ತೊಂದರೆಯಾಗಿದೆ.

***ಎಲ್.ಪಿ.ಜಿ. ನೀತಿ ಬರುವ ಮುಂಚೆ ಸೂಕ್ತ ತಯಾರಿಯ ಕೊರತೆಯಾಗಿದೆ:*** ಭಾರತ ದೇಶವು 1991 ರಲ್ಲಿ ಎಲ್.ಪಿ.ಜಿ.ಯ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರುವ ಮುಂಚೆ ಸಮಗ್ರ ಚರ್ಚೆ ಹಾಗೂ ನಿರ್ಧಾರ ಮತ್ತು ಅಗತ್ಯ ಸೂಕ್ತ ತಯಾರಿಯನ್ನು ವಿದೇಶಗಳಾದಂತಹ ಚೈನಾ ಅಥವಾ ವಿಯೊಟ್ನಂ ಮುಂತಾದ ವಿದೇಶಗಳಂತೆ ಮಾಡಿಕೊಳ್ಳದೆ ಕೇವಲ ಆರ್ಥಿಕವಾಗಿ ಅಂತರರಾಷ್ಟ್ರೀಯ ಮಟ್ಟದ ಸಂದಾಯ ಶಿಲ್ಕಿನ ಸರಿದೂಗಿಸುವಿಕೆಯ ಭಾಗವಾಗಿ ಎಲ್.ಪಿ.ಜಿ. ನೀತಿಯನ್ನು ಒಪ್ಪಿಕೊಂಡಿದ್ದು, ದೇಶದ ಜನರು ಇದರಿಂದ ಹಲವಾರು ಜ್ಞಾನದ ತೊಂದರೆಯನ್ನು ಅನುಭವಿಸುವಂತಾಯಿತು.

***ಪರಿಸರ ಮತ್ತು ಸುಸ್ಥಿರತೆಗೆ ಧಕ್ಕೆಯಾಗಿದೆ:*** ಎಲ್.ಪಿ.ಜಿ. ನೀತಿಯಿಂದ ದೇಶದಲ್ಲಿ ಜಾರಿಗೊಳಿಸುತ್ತಿರುವ ಅಭಿವೃದ್ಧಿಯ ಕಾರ್ಯಗಳು ಹಾಗೂ ಆರ್ಥಿಕ ಸುಧಾರಣಾ ಕಾರ್ಯಕ್ರಮಗಳು ಪರಿಸರದ ವಿಕೋಪಕ್ಕೆ ಕಾರಣವಾಗುತ್ತಿದೆ ಹಾಗೂ ವ್ಯಾಪಕವಾಗಿ ಹಾನಿಯಂಟುಮಾಡಲಿವೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಮಾರಕವಾಗುತ್ತದೆ ಎಂದು ಆರ್ಥಿಕ ವಿಮರ್ಶಕರು ತಿಳಿಸಿದ್ದಾರೆ.

ಒಟ್ಟಾರೆ ಆರ್ಥಿಕವಾದ ನೂತನ ನೀತಿಯ ಸಾಧಾರಣಾ ಕ್ರಿಯೆಗಳು ಭಾರತದ ಆರ್ಥಿಕತೆಯ ವಲಯದಲ್ಲಿ ವ್ಯಾಪಕವಾದ ಬದಲಾವಣೆಯನ್ನು ತಂದಿದೆ. ದೇಶದಲ್ಲಿ ಕೈಗಾರಿಕಾ ವಲಯ ಹೊಸ ಬದಲಾವಣೆಯ ಹುರುಪನ್ನು ಪಡೆಯುತ್ತಿದೆ ಮತ್ತು ದೇಶವು ಪ್ರಸ್ತುತ ಆಹಾರ ಮತ್ತು ವಿದೇಶಿ ಹಾಗೂ ವಿನಿಮಯ ಸಂಗ್ರಹ ವಿಚಾರದಲ್ಲಿ ರಫ್ತು ಹಾಗೂ ಆಮದಿನಲ್ಲಿ ಸುಸ್ಥಿತಿ ಯಲ್ಲಿರುವುದು ಸ್ವಲ್ಪಮಟ್ಟಿಗೆ ಚೇತರಿಸಿಕೊಂಡಿದೆ ಹಾಗೂ ದೇಶದ ಗ್ರಾಮೀಣ ಮಟ್ಟದಲ್ಲಿ ನೂತನ ಸುಧಾರಣಾ ಕ್ರಮಗಳನ್ನು ಕೃಷಿ ಕ್ಷೇತ್ರದಲ್ಲಿ ತರುವುದು ಬಹಳ ಪ್ರಾಮುಖ್ಯವಾಗಿವೆ. ತಂತ್ರಜ್ಞಾನದ ಅತಿಯಾದ ಬೆಳವಣಿಗೆಯಿಂದ ಮಾನವ ಸಂಪನ್ಮೂಲದ ಸದ್ಬಳಕೆಯು ಕಡಿಮೆಯಾಗಿ ನಿರುದ್ಯೋಗ ತಾಂಡವವಾಡುತ್ತಿವೆ ಹಾಗೂ ಬೃಹತ್ ಕೈಗಾರಿಕೆಗಳಿಂದ ರೋಗಗ್ರಸ್ತತೆಯು ಅಧಿಕಗೊಳ್ಳುತ್ತಿವುದು ಹಾಗೂ ಸಾಮಾಜಿಕ, ಆರ್ಥಿಕ ಅಸಮಾನತೆಯ ಅಂತರ ಜನಸಾಮಾನ್ಯರಲ್ಲಿ ಹೆಚ್ಚುತ್ತಿರುವುದು. ಬಡತನದ ತೀವ್ರತೆಯು ಗಂಭೀರ ಸಮಸ್ಯೆಯಾಗಿದ್ದು, ದೇಶದ ಅಭಿವೃದ್ಧಿಯಲ್ಲಿ ಸುಧಾರಣೆಯ ಸಾಮಾಜಿಕ ವೆಚ್ಚ ಅಧಿಕಗೊಂಡಿರುವುದು ಇನ್ನೊಂದು ಅಪಾಯಕಾರಿಯಾದ ಬೆಳವಣಿಗೆಯನ್ನು ನೂತನ ಆರ್ಥಿಕ ನೀತಿಯಾದ ಉದಾರೀಕರಣ ಖಾಸಗೀಕರಣ ಜಾಗತೀಕರಣದಿಂದ ಅನಾನುಕೂಲಗಳನ್ನು ನೋಡಬಹುದಾಗಿದೆ.

**ಉಪಸಂಹಾರ**

ಭಾರತವು ಅಳವಡಿಸಿಕೊಂಡ ಹೊಸ ಆರ್ಥಿಕ ನೀತಿಯನ್ನೇ ಎಲ್.ಪಿ.ಜಿ. ಎಂದು ಕರೆಯಲಾಗುತ್ತಿದೆ. ಎಲ್.ಪಿ.ಜಿ.ಯು ಭಾರತದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ತಂತ್ರಜ್ಞಾನ, ಆವಿಸ್ಕಾರ ಮುಂತಾದ ಸಂಶೋಧನೆಗೆ ಮೂಲಭೂತವಾಗಿ ಕಾರಣವಾಯಿತು ಹಾಗೂ ಅತೀ ಮುಖ್ಯವಾಗಿ ಭಾರತದ ಆರ್ಥಿಕ ವಲಯದಲ್ಲಿ ಮೊದಲು ಬದಲಾವಣೆಯನ್ನು ತಂದಿತು. ನಂತರ ದೇಶ ದೇಶಗಳ ನಡುವೆ ಅಂತರಾಷ್ಟ್ರೀಯವಾಗಿ ಆರ್ಥಿಕ ಕ್ಷೇತ್ರಾಭಿವೃದ್ಧಿಯಲ್ಲಿ ಆರ್ಥಿಕ ನೀತಿಯು ಬರುವ ಮುನ್ನ ಅಂದರೆ 1991ರ ಹಿಂದೆ ವಿಶ್ವದ ಆರ್ಥಿಕ ಸಮೀಕ್ಷೆಯಲ್ಲಿ ಹಿಂದುಳಿದ ರಾಷ್ಟ್ರವಾಗಿದ್ದು, ಭಾರತವು 1991ರ ನಂತರ ಉದಾರೀಕರಣ, ಖಾಸಗೀಕರಣ, ಜಾಗತೀಕರಣದಿಂದ ಅಂತರಾಷ್ಟ್ರೀಯ ವ್ಯಾಪಾರ, ವ್ಯವಹಾರ, ಆಮದು, ರಫ್ತು, ಕೈಗಾರಿಕೆ, ಉದ್ಯಮ ಕ್ಷೇತ್ರ ಉತ್ಪಾದನೆಯಲ್ಲಿ ಪೈಪೋಟಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವ ಹಾಗೆ ಭಾರತದ ಅಭಿವೃದ್ಧಿಶೀಲ ರಾಷ್ಟ್ರವಾಗಿ ಬೆಳೆದುಬರುತ್ತಿದೆ. ಆದರ ಜೊತೆ ಯಾವುದೇ ಸಂಪ್ರದಾಯವಾದ ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ ಕ್ಷೇತ್ರದಲ್ಲಿ ಹಲವಾರು ಸಾಮಾಜಿಕ ಸಮುದಾಯದಲ್ಲಿ ಬದಲಾವಣೆಯು ಜೀವನ ಶೈಲಿಯಿಂದ ಹಿಡಿದು ಆಹಾರ ಮತ್ತು ಆರೋಗ್ಯ ಹಾಗೂ ಜೀವನ ನಿರ್ವಹಣೆಯ ಬದಲಾವಣೆಯು ಸಕಾರಾತ್ಮಕವಾಗಿ ಬಂದಿರುವ ಹಾಗೆ ನಕರಾತ್ಮಕವಾಗಿಯೂ ತೊಂದರೆಗೆ ಸಿಲುಕಿರುವುದು ಈ ಜಾಗತೀಕರಣದ ನೀತಿಯಿಂದಾಗಿದೆ. ಉದಾ: ಅತೀ ಹೆಚ್ಚು ಕೈಗಾರಿಕೆಯ ಯಂತ್ರೋಧ್ಯೇಯದಿಂದ ಗ್ರಾಮೀಣ ಆರ್ಥಿಕತೆಯ ಸಣ್ಣ ಸಣ್ಣ ಗುಡಿಕೈಗಾರಿಕೆಗಳು ಮೂಲೆಗುಂಪಾಗಿವೆ ಹಾಗೂ ನಿರುದ್ಯೋಗ ಸಮಸ್ಯೆಯು ಅತೀ ಹೆಚ್ಚಾಯಿತು. ಏಕೆಂದರೆ ಮಾನವ ಶ್ರಮಗಿಂತ ಯಾಂತ್ರಿಕ ಕಂಪ್ಯೂಟರ್ AI–ಇಂಟಲಿಜನ್ಸ ತಂತ್ರಜ್ಞಾನದಿಂದಲೇ ಹೆಚ್ಚು ನಡೆಯುವುದರಿಂದ ಮಾನವ ಶ್ರಮ ಕಡಿಮೆಯಾಗಿ ಯಾಂತ್ರಿಕತೆಯ ಬಳಕೆ ಹೆಚ್ಚಾಗಿ ನಿರುದ್ಯೋಗ ಹೆಚ್ಚಾಯಿತು. ಹಾಗೆಯೇ ಸರ್ಕಾರಿ ಸಂಸ್ಥೆಯ ಒಡೆತನ ಕಡಿಮೆಯಾಗಿ ಖಾಸಗೀ ವಲಯದ ನಿಯಂತ್ರಣದಿಂದ ದೇಶೀಯ ಸ್ಥಳೀಯರಿಗೆ ಉದ್ಯೋಗವಕಾಶ ಕಡಿಮೆಯಾಯಿತು. ಆದರೂ ಆರ್ಥಿಕ ನೀತಿಯ ನೂತನ ಯೋಜನೆಗಳಿಂದ ಭಾರತದ ಆರ್ಥಿಕತೆಯ ಧೋರಣೆಗಳಲ್ಲಿ ವ್ಯಾಪಕವಾದ ಬದಲಾವಣೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ತಂದಿವೆ ಹಾಗೂ ದೇಶದ ಕೈಗಾರಿಕಾ ವಲಯ ಹೊಸ ಹುರುಪು ಮತ್ತು ನೋಟವನ್ನು ಪಡೆಯುತ್ತಿರುವುದು ಮತ್ತು ದೇಶದ ಗ್ರಾಮೀಣ ವಲಯ ಮೂಲ ಸಂಸ್ಕೃತಿಯ ಗ್ರಾಮೀಣ ಆರ್ಥಿಕತೆಯು ಹೊಸ ತಂತ್ರಜ್ಞಾನದೊಂದಿಗೆ ಮೂಲ ಗುಡಿಕೈಗಾರಿಕೆಯ ವಸ್ತುಗಳನ್ನು ನವೀನ ರೀತಿಯಲ್ಲಿ ಹುಳಿಸಿ ಬೆಳೆಸುವ ಕಾರ್ಯವು ನಡೆಯುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯು 18 ಗುಡಿ ಕೈಗಾರಿಕೆಗಳನ್ನು ಬೆಳೆಸಲು ಸಾಲ ಸೌಲಭ್ಯ ಯೋಜನೆ ಜಾರಿಗೊಳಿಸಿದೆ. ಎಲ್.ಪಿ.ಜಿ. ನೀತಿಯ ಅನುಷ್ಠಾನದ ತರುವಾಯ ದೇಶದ ಕೃಷಿ ಕ್ಷೇತ್ರದ ರೈತರು ಹಾಗೂ ಕಾರ್ಮಿಕರು ಮತ್ತು ಗ್ರಾಮೀಣ ಭಾಗದ ಜನರ ಜೀವನ ಶೈಲಿಯಲ್ಲಿ ಸುಧಾರಣೆಯು ಅಷ್ಟೊಂದು ಪ್ರಮಾಣದಲ್ಲಿ ಕಂಡುಬರುತ್ತಿಲ್ಲ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ನೀತಿಯು ಬೆಲೆ ಏರಿಕೆ ಹಾಗೂ ಬಿಗಿ ಹಿಡಿತವು ಎಲ್ಲಾ ಕ್ಷೇತ್ರಗಳಲ್ಲಿ ಕಂಡುಬರುತ್ತಿದ್ದು, ಭಾರತವು ಅಭಿವೃದ್ಧಿಶೀಲ ರಾಷ್ಟ್ರವಾಗಿದ್ದು, ಕೆಲವು ಬಿಲಿಯನರ್‌ಗಳ ಸಂಖ್ಯೆ ಅಧಿಕಗೊಳ್ಳುತ್ತಿದೆ. ಗ್ರಾಮೀಣ ಹಾಗೂ ನಗರ ಭಾಗಗಳಲ್ಲಿ ಒಟ್ಟಾರೆ ದೇಶದಲ್ಲಿ ಶ್ರೀಮಂತರು ಮತ್ತು ಬಡವರ ನಡುವೆ ದೊಡ್ಡ ಕಂದಕದ ಅಂತರವೆ ನಿರ್ಮಾಣವಾಗುತ್ತಿರುವುದನ್ನು ಕಾಣಬಹುದು. ಆದ್ದರಿಂದ ಪ್ರಸ್ತುತ ಕಾಲದಲ್ಲಿ ಎಲ್.ಪಿ.ಜಿ. ನೀತಿಯಿಂದ ಸಕರಾತ್ಮಕ ಬೆಳೆವಣಿಗೆ ಹಾಗೂ ನಕರಾತ್ಮಕ ಬೆಳವಣಿಗೆ ಎರಡನ್ನೂ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೋರಲಿಂಗಯ್ಯ, ಎನ್. (1994). *ಗ್ಯಾಟ್ ಒಪ್ಪಂದ ದಾರಿದೀಪ.* ಸಂಶೋಧನಾ ಕೇಂದ್ರ.
- ಕೃಷ್ಣಮೂರ್ತಿ, ಎಚ್.ಆರ್. (2009). ಭಾರತದ ಆರ್ಥಿಕ ಅಭಿವೃದ್ಧಿ, ಸಪ್ನಬುಕ್ ಹೌಸ್.
- ಕೃಷ್ಣಮೂರ್ತಿ, ಎಚ್.ಆರ್. ಸುಧಾರಣಾಪೂರ್ವ ಭಾರತದ ಆರ್ಥಿಕತೆ
- ಕೃಷ್ಣಮೂರ್ತಿ, ಎಚ್.ಆರ್. ಸಮಕಾಲೀನ ಭಾರತದ ಆರ್ಥಿಕತೆ
- ವೀರಯ್ಯ, ಕೆ.ಎಂ. ಮತ್ತು ಆರ್.ನಾಗಭುಷಣ್. ಅಂತರಾಷ್ಟ್ರೀಯ ವ್ಯವಹಾರ. ಸುರಭಿ ಪ್ರಕಾಶನ.
- ಯೋಜನಾ ಮಾಸಪತ್ರಿಕೆ. ಸಮಾಚಾರ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರ
- Baylis, J., Owens, P., & Smith, S. (Eds.). (2019). *The globalization of world politics: An introduction to international relations* (8th ed.). Oxford: Oxford University Press.
- Chandra, R. (2003). *Globalisation and social movements: Struggle for a humane society*. New Delhi: Commonwealth Publishers.
- Deshpande, A. (Ed.). (2010). *Globalization and development: A handbook of new perspectives*. Oxford: Oxford University Press.
- Jalan, B. (2002). *Globalisation and its impact on India*. New Delhi: Penguin Books.
- Nayar, B. R. (2006). *India's globalization: Evaluating the economic consequences*. Washington, D.C.: East-West Center.
- Singh, J. P. (2007). *Globalisation and Indian economy*. New Delhi: Deep & Deep Publications.
- Steger, M. B. (2013). *Making sense of globalization: A primer*. Lanham: Rowman & Littlefield Publishers.
- Stiglitz, J. E. (2002). *Globalization and its discontents*. New York: W.W. Norton & Company.